ತಖ್ತೆ : - 2

ಕೋಲಾರ ಜಿಲ್ಲೆಯಲ್ಲಿ ಸಂಗ್ರಹಿಸಲಾದ 106 ನೀರಿನಮಾದರಿಗಳ ಪೈಕಿ ಫ್ಲೋರೈಡ್ ಅಂಶದ ಬಗ್ಗೆ ತಾಲ್ಲೂಕುವಾರು ವಿವರಗಳು

ತಾಲ್ಲೂಕು	ನೀರಿನ ಮಾದರಿ	ಫ್ಲೋರೈಡ್ ಅಂಶ (ಪಿಪಿಎಂ) (ಸಂಖ್ಯೆ 1 ರಿಂದ 1.5 (ಸಂಖ್ಯೆ)	1.5 ರಿಂದ 6) (ಸಂಖ್ಯೆ)
1. ಕೋಲಾರ	24	17	7
2. ಮುಳುಬಾಗಿಲು	7	5	2
3. ಚಿಕ್ಕಬಳ್ಳಾಪುರ	9	9	-
4. ಶ್ರೀನಿವಾಸಪುರ	15	12	3
5. ಚಿಂತಾಮಣಿ	8	5	3
6. ಬಂಗಾರಪೇಟೆ	5	2	3
7. ಶಿಡ್ಲಘಟ್ಟ	4	3	1
8. ಬಾಗೇಪಲ್ಲಿ	21	6	15
9. ಮಾಲೂರು	-	-	-
10. ಗೌರಿಬಿದನೂರು	10	4	6
11. ಗುಡಿಬಂಡೆ	3	1	2
ಒಟ್ಟು	106	64	42

ವಿಷಯ : ಹಳ್ಳಿಗಾಡಿನ ಪ್ರದೇಶಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 733(695)

ಶ್ರೀ ಜಿ.ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಹಳ್ಳಿಗಾಡಿನ ಪ್ರದೇಶಗಳಲ್ಲಿನ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗಾಗಿ ಹೊಸ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ?

ಆ. ಹಾಗಿದ್ದರೆ ಈ ವರ್ಷ ಎಷ್ಟು ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸ ಲಾಗುವುದು?

ಇ. ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಕೊಡುತ್ತಿರುವ ಹಣದ ಮೊತ್ತವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು):

ಅ. ಹಳ್ಳಿಗಾಡಿನ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಾಗೂ ಹಿಂದುಳಿದ ವರ್ಗಗಳ ಮತ್ತು. ಅಲ್ಪಸಂಖ್ಯಾತರ ಇಲಾಖೆಗಳಲ್ಲಿ ನಿಲಯದ ಅವಶ್ಯಕತೆ ಆಧಾರದ ಮೇಲೆ ಹೊಸ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಹೊಸ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗುವುದು.

ಆ. ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಗಳ ವ್ತಿಯಿಂದ 1994-95ನೇ ಸಾಲಿನಲ್ಲಿ ಯಾವುದೇ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿರುವುದಿಲ್ಲ.

ಇ. ಇಲ್ಲ.

ವಿಷಯ: ಕೋಲಾರ ಜಿಲ್ಲೆಯಲ್ಲಿನ ಕುಡಿಯುವ ನೀರಿನಲ್ಲಿರುವ ಲವಣದ ಅಂಶಗಳ ಬಗ್ಗೆ ಇಲಾಖೆಯ ವರದಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 734(697)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು

ಅ. ಕೋಲಾರ ಜಿಲ್ಲೆಯಲ್ಲಿನ ಕುಡಿಯುವ ನೀರಿನಲ್ಲಿ ಮುಖ್ಯ ಫ್ಲೋರೈಡ್ ಲವಣಗಳು ಹೆಚ್ಚಿರುವುದರ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಪರಿಶೀಲಿಸಿ ಸರ್ಕಾರಕ್ಕೆ ವರದಿ ಮಾಡಿದೆಯೇ?

ಆ. ಹಾಗಿದ್ದಲ್ಲಿ ವರದಿಯ ವಿವರಗಳನ್ನು ತಿಳಿಸುವುದು.

ಶ್ರೀ ಎಸ್.ಡಿ. ಜಯರಾಂ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

ಅ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಬಾವಿಗಳಿಂದ ಹಾಗೂ ಇಲಾಖಾ ವತಿಯಿಂದ ಕೊರೆಯಲಾದ ನಿರೀಕ್ಷಣಾ ಬಾವಿಗಳಿಂದ ಒಟ್ಟು 106 ನೀರಿನ ಮಾದರಿಗಳನ್ನು ಫ್ಲೋರೈಡ್ ಅಂಶಕ್ಕಾಗಿ ವಿಶ್ಲೇಷಿಸಿ, ಜಿಲ್ಲಾ ಪಂಚಾಯತ್ ಅಂತರ್ಜಲ ಘಟಕದ ಕಛೇರಿಗೆ ವಿವರಗಳನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಆ. 1993-94 ಮತ್ತು 1994-95ರ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಬಾವಿಗಳಿಂದ ಹಾಗೂ ಇಲಾಖಾ ವತಿಯಿಂದ ಕೊರೆಯಲಾದ ನಿರೀಕ್ಷಣಾ ಬಾವಿಗಳಿಂದ ಒಟ್ಟು 106 ನೀರಿನ ಮಾದರಿಗಳನ್ನು ಸಂಗ್ರಹಿಸಿ, ಫ್ಲೋರೈಡ್ ಅಂಶಕ್ಕೆ ವಿಶ್ಲೇಷಿಸಲಾಗಿ, 42 ನೀರಿನ ಮಾದರಿಗಳಲ್ಲಿ 1.50 ರಿಂದ 6 ಪಿಪಿಎಂ (ಪಾರ್ಟ್ಸ್‌ಪರ್ ಮಿಲಿಯನ್) ವರೆವಿಗೆ ಫ್ಲೋರೈಡ್ ಅಂಶ ಇರುವುದು ಕಂಡು ಬಂದಿದೆ. ಮತ್ತು ಮಿಕ್ಕ 64 ಮಾದರಿಗಳಲ್ಲಿ 1 ರಿಂದ 1.5 ಪಿಪಿಎಂ ವರೆವಿಗೆ ಫ್ಲೋರೈಡ್ ಅಂಶ ಇರುವುದು ಕಂಡು ಬಂದಿದೆ. ಭಾರತೀಯ ಮೌಲ್ಯ ಮಾಪನ ಸಂಸ್ಥೆಯ ನಿಗದಿಯ ಪ್ರಕಾರ 1.5ಕ್ಕೂ ಹೆಚ್ಚು ಪಿಪಿಎಂ ಫ್ಲೋರೈಡ್ ಅಂಶ ಇದ್ದಲ್ಲಿ ಅದು